## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2019-20ನೇ ಸಾಲಿನಲ್ಲಿ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಯೋಜನೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ:-

1. ಸರ್ಕಾರದ ಆದೇಶ ಸಂಖ್ಯೆ ಕಾಇ 14 ಕಾಬಾಸೇ 2018, ದಿನಾಂಕ: 9-04-2018
2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2019, ದಿನಾಂಕ: 03/04/2019
3. ಆರ್ಥಿಕ ಇಲಾಖೆಯ ಆಯವ್ಯಯ ಸಲಹಾ ಟಿಪ್ಪಣಿ ಸಂಖ್ಯೆ: ಆಇ 380 ವೆಚ್ಚ-9/2019, ದಿನಾಂಕ: 04/04/2019
4. ಸರ್ಕಾರದ ಆದೇಶ ಸಂಖ್ಯೆ: ಪಿಡಿ 14 ಐಎಂಎಂ 2017, ದಿನಾಂಕ: 23/03/2017.

***

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ 2018-19ನೇ ಸಾಲಿನಲ್ಲಿ ವರ್ಕಿಂಗ್ ಕಂಡೀಷನ್ಸ್ ಅಂಡ್ ಸೇಫ್ಟಿ-ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್ ಯೋಜನೆ (ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳನ್ನೊಳಗೊಂಡಂತೆ) ಮುಂದುವರೆಸಲಾಗಿರುತ್ತದೆ.

2019-20ನೇ ಸಾಲಿನಲ್ಲಿ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಗೆ ಲೆಕ್ಕಶೀರ್ಷಿಕೆ 2230-01-102-0-01 "ವರ್ಕಿಂಗ್ ಕಂಡೀಷನ್ಸ್ ಅಂಡ್ ಸೇಫ್ಟಿ" ಅಡಿಯಲ್ಲಿ ಒಟ್ಟು ರೂ. 1492.00 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶದಲ್ಲಿ 2019-20ನೇ ಸಾಲಿನಲ್ಲಿ ಮೊದಲನೇ ಕಂತಿನ ಹಣ ಬಿಡುಗಡೆಗೆ ಸಂಬಂಧಿಸಿದಂತೆ ಅನುಬಂಧ-2 ರಲ್ಲಿ ಪಟ್ಟಿ ಮಾಡಲಾದ ಬಾಬ್ತುಗಳಿಗೆ ಆರ್ಥಿಕ ಇಲಾಖೆಯ ಸಹಮತಿ ಇದೆ ಎಂದು ಭಾವಿಸಿ ಆಡಳಿತ ಇಲಾಖೆಗಳು ಹಣ ಬಿಡುಗಡೆ ಮಾಡಬಹುದೆಂದು ಆದೇಶಿಸಿರುತ್ತದೆ.

ಮೇಲೆ ಓದಲಾದ (3)ರಲ್ಲಿ ಆರ್ಥಿಕ ಇಲಾಖೆಯ ಆಯವ್ಯಯ ಸಲಹಾ ಟಿಪ್ಪಣಿಯಲ್ಲಿ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಲೆಕ್ಕಶೀರ್ಷಿಕೆ 2230-01-102-0-01 ರಡಿ ಉಪ ಲೆಕ್ಕಶೀರ್ಷಿಕೆ 059-ಇತರೆ ಖರ್ಚುಗಳು ಅಡಿ ಹೊಸ ಆಯವ್ಯಯ ಘೋಷಣೆಗಾಗಿ ರೂ. 100.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಹೊಸ ಆಯವ್ಯಯ ಘೋಷಣೆಯು ಅಂತಿಮ ಕ್ಷಣದಲ್ಲಿ ಕೈಬಿಡಲಾದ ಕಾರಣ ರೂ. 100.00 ಲಕ್ಷಗಳನ್ನು ಅಧ್ಯರ್ಪಿಸಿಕೊಳ್ಳಲಾಗುವುದು ಹಾಗೂ ಸದರಿ ಉಪ ಲೆಕ್ಕಶೀರ್ಷಿಕೆಯಡಿ ರೂ.50.00 ಲಕ್ಷಗಳ ಅನುದಾನವನ್ನು ಮಾತ್ರ ಪರಿಗಣಿಸುವಂತೆ ತಿಳಿಸಿರುತ್ತಾರೆ.

ಮೇಲೆ ಓದಲಾದ (4)ರ ಸರ್ಕಾರಿ ಆದೇಶದನ್ವಯ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಗೆ ಸಂಬಂಧಿಸಿದಂತೆ 2019-20ನೇ ಸಾಲಿನಲ್ಲಿ ಮುಂದುವರೆದ ಯೋಜನಾ ಕಾರ್ಯಕ್ರಮಗಳಾದ "ವರ್ಕಿಂಗ್ ಕಂಡೀಷನ್ಸ್ ಅಂಡ್ ಸೇಫ್ಟಿ-ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್" ಈ ಯೋಜನೆ ಅಡಿಯಲ್ಲಿರುವ ಹುದ್ದೆಗಳನ್ನು 2019-20ನೇ ಸಾಲಿನಲ್ಲಿ ಮುಂದುವರಿಸಲು ಸರ್ಕಾರದ ಮಂಜೂರಾತಿ ನೀಡಬೇಕಾಗಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಕಾಇ 7 ಕಾಬಾಸೇ 2019, ಬೆಂಗಳೂರು, ದಿನಾಂಕ:26-04-2019**

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಗೆ ಸಂಬಂಧಿಸಿದಂತೆ 2019-20ನೇ ಸಾಲಿಗೆ ಆಯವ್ಯಯದಲ್ಲಿ ಅನುದಾನ ಅವಕಾಶ ಮಾಡಿರುವ "ವರ್ಕಿಂಗ್ ಕಂಡೀಷನ್ಸ್ ಅಂಡ್ ಸೇಫ್ಟಿ-ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್" ಯೋಜನೆಯನ್ನು (ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳನ್ನೊಳಗೊಂಡಂತೆ) ಮುಂದುವರೆಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ:-

1. 2018-19ನೇ ಸಾಲಿನಲ್ಲಿ ಮುಂದುವರೆದ ಯೋಜನಾ ಕಾರ್ಯಕ್ರಮಗಳನ್ನು ಮಾತ್ರ 2019-2020ನೇ ಸಾಲಿನಲ್ಲಿ ಮುಂದುವರೆಸಬೇಕು.
2. ನಮುಂದುವರೆಸಲು ಉದ್ದೇಶಿಸಿರುವ ಯೋಜನೆಗಳ ಸಿಬ್ಬಂದಿಯನ್ನು ಹೊಸದಾಗಿ ಸೃಜಿಸುವ ಬಗ್ಗೆ ಹಾಗೂ ಹೊಸ ವಾಹನಗಳ ಖರೀದಿ, ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದಂತೆ, ಸರ್ಕಾರಿ ಆದೇಶಗಳ ಸಂಖ್ಯೆ: ಪಿಡಿ17ಐಎಂಎಂ 2005, ದಿನಾಂಕ: 10.08.2005 ಮತ್ತು 28.03.2009, ಪಿಡಿ05ಐಎಂಎಂ2010, ದಿನಾಂಕ: 03.04.2010 ಹಾಗೂ ಪಿಡಿ14ಐಎಂಎಂ2017, ದಿನಾಂಕ: 23.03.2017 ರನ್ವಯ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.
3. 2019-20 ನೇ ಸಾಲಿಗೆ ಮುಂದುವರೆಸಲಾದ ಯೋಜನೆಗಳಿಗೆ ಅನುದಾನ ಬಿಡುಗಡೆಗೊಳಿಸುವಲ್ಲಿ, ಸದರಿ ಮಂಜೂರಾತಿಯು ಈ ಯೋಜನೆಗೆ ಸಂಬಂಧಿಸಿದಂತೆ ಆಯವ್ಯಯದಲ್ಲಿ ನಿಗದಿಪಡಿಸಲಾದ ಮೊತ್ತವನ್ನು ಯಾವುದೇ ಕಾರಣಕ್ಕೂ ಮೀರಕೂಡದು ಹಾಗೂ ಈ ಕಾರ್ಯಕ್ರಮದಡಿ ಉಪಕರಣಗಳನ್ನು ಖರೀದಿಸುವುದು
4. 1ನೇ ಏಪ್ರಿಲ್ 2019 ರಿಂದ 31ನೇ ಜುಲೈ 2019 ರವರೆಗಿನ ಅವಧಿಯ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕಕ್ಕೆ ಸಂಬಂದಿಸಿದಂತೆ ಅಧಿಕೃತ ಜ್ಞಾಪನ ಸಂಖ್ಯೆ:ಎಫ್‌ಡಿ 18 ಬಿಪಿಇ 2018, ದಿನಾಂಕ:19.03.2019ರ ಷೆಡ್ಯೂಲ್‌ನಂತೆ ಕ್ರಮವಹಿಸತಕ್ಕದ್ದು.
5. 2019-20ನೇ ಸಾಲಿಗೆ ಕಛೇರಿ ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳನ್ನೊಳಗೊಂಡಂತೆ ಆಯವ್ಯಯ ಅನುದಾನ ಅವಕಾಶಕ್ಕನುಸಾರ ಹಾಗೂ ಆಯವ್ಯಯ ಮಾರ್ಗಸೂಚಿಗಳು ಮತ್ತು ಮಿತವ್ಯಯ ಆದೇಶಗಳನ್ನು ಪಾಲಿಸುವುದಕ್ಕೊಳಪಟ್ಟು ದರಗುತ್ತಿಗೆದಾರರ ಮೂಲಕ ಕರ್ನಾಟಕ ಸರಕು ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು 2000 ಕ್ಕೆ ಒಳಪಟ್ಟು ಖರೀದಿಸಲು ಪ್ರತ್ಯಾಯೋಜಿಸಲಾದ ಅಧಿಕಾರಗಳಿಗೆ ಅನುಸಾರವಾಗಿ ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳನ್ನು ಖರೀದಿ, ಸರಬರಾಜು ಹಾಗೂ ವಿತರಣೆ ಇವುಗಳನ್ನು ಮಾಡಲು ಮುಂದಿನ ಕ್ರಮವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಪಿಡಿ17ಐಎಂಎಂ2005, ದಿನಾಂಕ:10.08.2005 ಮತ್ತು ದಿನಾಂಕ: 28.03.2009, ಆದೇಶ ಸಂಖ್ಯೆ: ಪಿಡಿ05ಐಎಂಎಂ 2010, ದಿನಾಂಕ:03.04.2010 ರನ್ವಯ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ01ಟಿಎಫ್‌ಪಿ 96, ದಿನಾಂಕ: 10.07.1996 ಮತ್ತು ಆದೇಶ ಸಂಖ್ಯೆ: ಎಫ್‌ಡಿ09ಟಿಎಫ್‌ಪಿ 2004, ದಿನಾಂಕ: 17.08.2004 ಮತ್ತು ಪಿಡಿ14ಐಎಂಎಂ2017,

ದಿನಾಂಕ:23.03.2017 ಹಾಗೂ ಆದೇಶ ಸಂಖ್ಯೆ: ಎಫ್‌ಡಿ01ಟಿಎಫ್‌ಪಿ 2019, ದಿನಾಂಕ:03.04.2019 ಗಳಲ್ಲಿ ಆಡಳಿತ ಇಲಾಖೆಗಳ ಪ್ರಧಾನಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

A.N. Radhamani 26/11/19
(ಎ. ಎನ್. ರಾಧಾಮಣಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ
(ಕಾರ್ಖಾನೆ ಮತ್ತು ಬಾಯ್ಲರುಗಳು)

ಇವರಿಗೆ:

1. ಮಹಾಲೇಖಾಪಾಲರು, ಲೆಕ್ಕಪತ್ರ/ಲೆಕ್ಕ ಪರಿಶೋಧನೆ, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, 2ನೇ ಮಹಡಿ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 ಮತ್ತು 9), ವಿಧಾನ ಸೌಧ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಕಾರ್ಮಿಕ ಇಲಾಖೆ.
6. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ.
9. ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರ ಆಪ್ತ ಶಾಖೆ.
10. ಸರ್ಕಾರದ ಉಪ ಕಾರ್ಯದರ್ಶಿ-2, ಕಾರ್ಮಿಕ ಇಲಾಖೆ ಇವರ ಆಪ್ತ ಶಾಖೆ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.